ಶಿಕ್ಷಣ ಸಂಸ್ಥೆಗಳಲ್ಲಿ ಅಧ್ಯಾಪಕರ ಕೊರತು

2786 - ಶ್ರೀ ಜಿ.ಎಸ್. ಆಚಾರ್ (ಬೈಂದೂರು) : ಮಾನ್ಯ ಶಿಕ್ಷಣ ಹಾಗೂ ಸಂಸದೀಯ ವ್ಯವಹಾರಗಳ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದ ಸರ್ಕಾರಿ ಪದವಿ ಪೂರ್ವ ಕಾಲೇಜುಗಳಲ್ಲಿ ಖಾಲಿಯಿರುವ ಪ್ರಾಂಶುಪಾಲರು ಮತ್ತು ಉಪನ್ಯಾಸಕರ ಹುದ್ದೆಗಳ ಸಂಖ್ಯೆ ಎಷ್ಟು? (ಜಿಲ್ಲಾವಾರು ವಿವರಗಳನ್ನು ಒದಗಿಸುವುದು)

ಆ) ರಾಜ್ಯದ ಸರ್ಕಾರಿ ಹೈಸ್ಕೂಲ್‌ಗಳಲ್ಲಿ ಖಾಲಿಯಿರುವ ಮುಖ್ಯೋಪಾಧ್ಯಾಯರು ಮತ್ತು ಅಧ್ಯಾಪಕರ ಹುದ್ದೆಗಳ ಸಂಖ್ಯೆ ಎಷ್ಟು?

ಇ) ಖಾಲಿ ಇರುವ ಹುದ್ದೆಗಳನ್ನು ಎಂದಿನಿಂದ ತುಂಬಲಾಗುವುದು ಹಾಗೂ ಈ ಬಗ್ಗೆ ಸರ್ಕಾರ ಕೈಗೊಂಡ ಕ್ರಮವೇನು?

ಶ್ರೀ ಎಂ. ವೀರಪ್ಪ ಮೊಯಿಲಿ (ಶಿಕ್ಷಣ ಹಾಗೂ ಸಂಸದೀಯ ವ್ಯವಹಾರಗಳ ಸಚಿವರು) :

ಅ) ಪ್ರಾಂಶುಪಾಲರ ಒಟ್ಟು ಹುದ್ದೆಗಳು 75 ಖಾಲಿ

ಉಪಾನ್ಯಾಸಕರ ಒಟ್ಟು ಹುದ್ದೆಗಳು 318 ಹುದ್ದೆ

ಕ್ರ. ಸ.	ಜಿಲ್ಲೆ	ಪ್ರಾಂಶುಪಾಲರ ಹುದ್ದೆಗಳು	ಉಪನ್ಯಾಸಕರ ಹುದ್ದೆಗಳು
1	2	3	4
1)	ಬೆಂಗಳೂರು ಉತ್ತರ	-	01
2)	ತುಮಕೂರು	-	16
3)	ಕೋಲಾರ	02	13
4)	ಚಿತ್ರದುರ್ಗ	02	04
5)	ಶಿವಮೊಗ್ಗ	07	16
6)	ಮೈಸೂರು	-	16
7)	ಮಂಡ್ಯ	02	18
8)	ಹಾಸನ	08	31
9)	ಚಿಕ್ಕಮಗಳೂರು	05	15
10)	ಕೊಡಗು	03	09
11)	ದಕ್ಷಿಣ ಕನ್ನಡ	16	60
12)	ಬೆಳಗಾಂ	-	-
13)	ಕಾರವಾರ	02	–
14)	ಧಾರವಾಡ	02	02
15)	ಬಿಜಾಪುರ	01	03
16)	ಗುಲ್ಬರ್ಗಾ	09	49

17) ರಾಯಚೂರು	09	32
18) ಬಳ್ಳಾರಿ	03	08
19) ಬೀದರ್	04	22
20) ಬೆಂಗಳೂರು ದಕ್ಷಿಣ	-	-
21) ಬೆಂಗಳೂರು ಗ್ರಾಮಾಂತರ	-	03
ಒಟ್ಟು	75	318
ಆ) ಮುಖ್ಯೋಪಧ್ಯಾಯರ ಖಾಲಿ ಹುದ್ದೆ	-	165
ಅಧ್ಯಾಪಕರುಗಳ ಖಾಲಿ ಹುದ್ದೆ	-	1,685

ಕ್ರ. ಸಂ.	ಜಿಲ್ಲೆ	ಮುಖ್ಯ ಶಿಕ್ಷಕರ ಹುದ್ದೆಗಳು	ಶಿಕ್ಷಕರ ಹುದ್ದೆಗಳು
1	2	3	4
1)	ಬೆಂಗಳೂರು ಉತ್ತರ	-	22
2)	ತುಮಕೂರು	02	134
3)	ಕೋಲಾರ	03	116
4)	ಚಿತ್ರದುರ್ಗ	-	59
5)	ಶಿವಮೊಗ್ಗ	-	144
6)	ಮೈಸೂರು	07	42
7)	ಮಂಡ್ಯ	04	33
8)	ಹಾಸನ	07	134
9)	ಚಿಕ್ಕಮಗಳೂರು	05	86
10)	ಕೊಡಗು	06	52
11)	ದಕ್ಷಿಣ ಕನ್ನಡ	33	231
12)	ಬೆಳಗಾಂ	-	16
13)	ಕಾರವಾರ	18	33
14)	ಧಾರವಾಡ	20	52
15)	ಬಿಜಾಪುರ	05	18
16)	ಗುಲ್ಬರ್ಗಾ	22	245
17)	ರಾಯಚೂರು	15	117
18)	ಬಳ್ಳಾರಿ	05	22
19)	ಬೀದರ್	07	91
20)	ಬೆಂಗಳೂರು ದಕ್ಷಿಣ	-	08
21)	ಬೆಂಗಳೂರು ಗ್ರಾಮಾಂತರ	01	30
	ಒಟ್ಟು	165	1,685

ಇ) *ಪ್ರಾಂಶುಪಾಲರ ಹುದ್ದೆ*

ಖಾಲಿಯಿರುವ ಪ್ರಾಂಶುಪಾಲರ ಹುದ್ದೆಯನ್ನು ಉಪನ್ಯಾಸಕರ ಜೇಷ್ಠತಾ ಪಟ್ಟಿಯಾನುಸಾರ ಉಪನ್ಯಾಸಕರಿಗೆ ಪ್ರಾಂಶುಪಾಲರಾಗಿ ಬಡ್ತಿ ನೀಡಿ ತುಂಬಲು ಕ್ರಮ ಕೈಗೊಳ್ಳಲಾಗುತ್ತಿದೆ.

ಉಪನ್ಯಾಸಕರ ಹುದ್ದೆಗಳು

ಖಾಲಿಯಿರುವ 318 ಉಪನ್ಯಾಸಕರ ಹುದ್ದೆಗಳಲ್ಲಿ 206 ಪ್ರೌಢ ಶಾಲಾ ಸಹ ಶಿಕ್ಷಕರುಗಳಿಗೆ ನಿಯಮ 32ರ ಪ್ರಕಾರ ಉಪನ್ಯಾಸಕರಾಗಿ ನೇಮಕಾತಿ ನೀಡಲಾಗಿದೆ. ಅರ್ಹ ಸಹಶಿಕ್ಷಕರಿಲ್ಲದ ಕಾರಣ ಉಳಿದ 112 ಹುದ್ದೆಗಳನ್ನು ನೇರ ನೇಮಕಾತಿಯಿಂದ ತುಂಬಲು ಕ್ರಮಕೈಗೊಳ್ಳಲಾಗುತ್ತಿದೆ.

ಮುಖ್ಯೋಪಾಧ್ಯಾಯರ ಹುದ್ದೆಗಳು

ಖಾಲಿಯಿರುವ 165 ಮುಖ್ಯ ಶಿಕ್ಷಕರ ಹುದ್ದೆ (ಖಾಲಿ)ಗಳನ್ನು ಕೆ.ಸಿ.ಎಸ್.ಆರ್. ನಿಯಮ 32 ರಂತೆ ತುಂಬಲು ಕ್ರಮಕೈಗೊಳ್ಳಲಾಗುತ್ತಿದೆ.

ಅಧ್ಯಾಪಕರ ಹುದ್ದೆಗಳು

ಖಾಲಿಯಿರುವ 1,685 ಸಹ ಶಿಕ್ಷಕರ ಹುದ್ದೆಗಳಲ್ಲಿ ಶೇ.25 ರಷ್ಟನ್ನು ಪ್ರಾಥಮಿಕ ಶಾಲಾ ಶಿಕ್ಷಕರಿಗೆ ಅರ್ಹತೆ ಮತ್ತು ಜೇಷ್ಠತೆಯ ಆಧಾರದ ಮೇಲೆ ಬಡ್ತಿ ನೀಡಿ ತುಂಬಲು ಸಹ ನಿರ್ದೇಶಕರುಗಳಿಗೆ ಆದೇಶ ನೀಡಲಾಗಿದೆ. ಉಳಿದ ಸ್ಥಾನಗಳಲ್ಲಿ ಶೇ.40ರಷ್ಟು ಹುದ್ದೆಗಳನ್ನು ಸ್ಟೈಫಂಡರಿ ಪದವೀಧರರಿಂದ ತುಂಬಲು ಕ್ರಮಕೈಗೊಳ್ಳಲಾಗಿದೆ. ಇನ್ನುಳಿದ ಖಾಲಿ ಹುದ್ದೆಗಳನ್ನು ನೇರನೇಮಕಾತಿ ಮೂಲಕ ತುಂಬಲು ಕ್ರಮಕೈಗೊಳ್ಳಲಾಗುವುದು.

ಸಹಕಾರಿ ಸಂಘಗಳಿಗೆ ಮಹಾಸಭೆ ಮತ್ತು ಚುನಾವಣೆ

2787 - ಶ್ರೀ ಜಿ.ಎಸ್. ಅಚಾರ್ (ಬೈಂದೂರ್) : ಮಾನ್ಯ ಸಹಕಾರ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ರಾಜ್ಯದಲ್ಲಿರುವ ಸಹಕಾರ ಸಂಘಗಳ ಮಹಾಸಭೆ ಮತ್ತು ಚುನಾವಣೆಗಳನ್ನು ಮುಂದೂಡಲು ಕಾರಣಗಳೇನು?*

ಆ) *ವಿವಿಧ ಸಂಘಗಳಿಗೆ ಬೇರೆ ಬೇರೆ ತಿಂಗಳುಗಳಲ್ಲಿ ಮಹಾಸಭೆ ಮತ್ತು ಚುನಾವಣೆ ಜರುಗಿಸುವ ಉದ್ದೇಶವೇನು?*

ಇ) *ಸರ್ಕಾರಿ ಆದೇಶದ ಪ್ರಕಾರ ಈ ಉದ್ದೇಶ ಈಡೇರುತ್ತಿದೆಯೇ?*

ಶ್ರೀ ಎಸ್.ಆರ್. ಮೋರೆ (ಸಹಕಾರ ರಾಜ್ಯ ಸಚಿವರು) :

ಅ) ಮಳೆಗಾಲದ ಕಾರಣ ಮಹಾಸಭೆ ಮತ್ತು ಚುನಾವಣೆಗಳನ್ನು ಮುಂದೂಡಲಾಗಿದೆ.

ಆ) ಕೆಳ ಹಂತದ ಸಹಕಾರಿ ಸಂಘಗಳ ಚುನಾವಣೆ ನಂತರ ಇದರ ಪ್ರತಿನಿಧಿಗಳು ಮೇಲಿನ ಹಂತದ ಸಹಕಾರ ಸಂಘಗಳ ಚುನಾವಣೆಗಳಲ್ಲಿ ಭಾಗವಹಿಸಲು ಈ ವ್ಯವಸ್ಥೆ ಮಾಡಲಾಗಿದೆ.

ಇ) ಹೌದು.